ಸಂಕಟವನ್ನೂ ಕೆರಳಿಸುತ್ತದೆ.

ನಾನು ಮೂವತ್ತರ ಪ್ರಾಯದಲ್ಲಿದ್ದಾಗ, ಮೇಘಲೋಕದಿಂದ ಭೂಮಿಯನ್ನು ಹಕ್ಕಿನೋಟದಲ್ಲಿ ಕಾಣುವ ಅವಕಾಶ ಸಿಕ್ಕಿತು. ಅದೊಂದು ಬೇಸಿಗೆ ಹಗಲು. ಆಕಾಶ ತೊಳೆದ ನೀಲಾಂಗಣವಾಗಿತ್ತು. ವಿಮಾನ ಚಾಲಕರು 'ನಾವೀಗ ಇಂತಿಂಥ ನಗರದ ಮೇಲೆ ಹಾರುತ್ತಿದ್ದೇವೆ' ಎಂದು ಘೋಷಿಸುತ್ತಿದ್ದರು. ಆದರೆ, ಕೆಳಗೆ ಹಾಯುವ ನದಿಗಳ ಹೆಸರನ್ನು ಹೇಳುತ್ತಿರಲಿಲ್ಲ. ವಿಮಾನದ ಕಿಟಕಿಗೆ ಗೋಣಿಟ್ಟು ಕೂತು, ಗಾಳಿಹಾದಿಯಲ್ಲಿ ಅಡ್ಡಸಿಗುವ ತುಂಗಭದ್ರಾ, ಕೃಷ್ಣಾ, ಗೋದಾವರಿ, ನರ್ಮದಾ, ಚಂಬಲ್, ಯಮುನೆಯರನ್ನು ವೀಕ್ಷಿಸುತ್ತ ದೆಹಲಿ ಮುಟ್ಟಿದೆ. ಭಾರತದ ಈ ನದಿಗಳು ಚೆಲ್ಲುಹುಡುಗಿ ಬೀಳಿಸಿಕೊಂಡು ಹೋದ ದಾವಣಿಗಳಾಗಿದ್ದವು; ಪರ್ವತ ಪ್ರದೇಶವನ್ನು ತೊರೆದು ಬಯಲನರಸಿ ಬರುವ, ನೆರೆಬಂದಾಗ ಊರುಗಳನ್ನೇ ಮುಳುಗಿಸುವ ಇವು, ಮಣ್ಣಹಾಳೆಯ ಮೇಲೆಳೆದ ಬೆಳ್ಳನೆ ಗೀಟುಗಳಾಗಿದ್ದವು. ಮುಗಿಲ ಮೇಲಿಂದ ಇವನ್ನು ಗುರುತಿಸುವುದು ಸುಲಭ ಕೂಡ. ದಂಡೆಗೆ ಲಗತ್ತಾಗಿ ಊರು ತೋಟ ಗದ್ದೆಗಳು ಇರುವವು – ಪತ್ತಲಕ್ಕೆ ಕಟ್ಟಿದ ಕಸೂತಿ ಅಂಚಿನಂತೆ. ಗೌಹಾತಿಗೆ ಇಳಿವಾಗ ಬ್ರಹ್ಮಪುತ್ರವನ್ನು ಗಮನಿಸಿದೆ; ಮಕ್ಕಳು ಕಾಗದದ ದೋಣಿಯನ್ನು ತೇಲಿಬಿಡುವ ಅಂಗಳದಲ್ಲಿ ಹರಿವ ಬಗ್ಗಡ ನೀರಿನಂತೆ ಕ್ಷುದ್ರವೆನಿಸಿತು. ದಡಕ್ಕೆ ಬಂದು ನಿಂತರೆ ಸಾಕ್ಷಾತ್ ಸಮುದ್ರ.

ಪರ್ವತ ಮೇಲಿಂದಲೂ ಕೆಳಲೋಕ ಚಿತ್ರವತ್ತಾಗಿ ಕಾಣುವುದು. ಕೊಡಚಾದ್ರಿಯ ತುದಿಯಲ್ಲಿ ಸೂರ್ಯೋದಯಕ್ಕೆ ಮುನ್ನ ಹೋಗಿ ಕೂರಬೇಕು. ಚಳಿಗಾಲದ ಮೋಡಗಳಿಂದ ಇಡೀ ಭಗವತಿ ಕಾಡಿನ ಕಣಿವೆ ಮೊಸರು ತುಂಬಿದ ಪಾತ್ರೆಯಾಗುತ್ತದೆ. ಮೇಲಿನಿಂದ ಕಣಿವೆಗಳನ್ನು ಕಾಣುವಾಗೆಲ್ಲ ಹಕ್ಕಿಯಾಗಿದ್ದರೆ ರೆಕ್ಕೆಬಿಚ್ಚಿ ಜಿಗಿಯಬಹುದಿತ್ತು ಎಂಬ ಆಲೋಚನೆ ಸುಳಿಯುವುದು. ಈ ಹಕ್ಕಿತುಡಿತವನ್ನು ಬಗಲಿಗೆ ದೀಪಸ್ಥಂಭಗಳಂತಹ ಬೆಟ್ಟಗಳನ್ನು ಹೊಂದಿರುವ ಊರುಗಳೆಲ್ಲ ಹುಟ್ಟಿಸುತ್ತವೆ. ಉದಯಪುರ, ಗಜೇಂದ್ರಗಡ, ದೌಲತಾಬಾದ್, ಗೋಕಾಕ, ನರಗುಂದ, ಮೈಸೂರು, ಕೋಲಾರಗಳು ಕಾಳುಚೆಲ್ಲಿದ ಅಂಗಳಗಳು. ವಿಶೇಷವೆಂದರೆ, ಬೆಟ್ಟಗಳ ಮೇಲಿದ್ದಾಗ ಬಾರದ ಪತನದ ಆತಂಕ, ವಿಮಾನದಲ್ಲಿ ಕಾಣಿಸುತ್ತದೆ. ಆದರೆ, ಕೆಳಗಿನ ಬೃಹತ್ ಗಾತ್ರಗಳೆಲ್ಲ ಕುಬ್ಜಗೊಂಡು ಕಣ್ಣ ಅಧೀನಕ್ಕೆ ಒಳಪಡುತ್ತಿದ್ದಂತೆ, ಆತಂಕ ಮೆಲ್ಲನೆ ಮರೆಯಾಗುತ್ತದೆ. ಆಗ ಕಾಣುವ ಭೂಮಿಯು ಕಳಚಿಬಿದ್ದ ಭೂಪಟದ ಒಂದು ಹಾಳೆ; ಮಹಾಸಾಗರಗಳಲ್ಲಿ ಸಂಚರಿಸುವ ಭಾರೀ ನೌಕೆಗಳು, ನೀಲಿಹಾಳೆಯ ಮೇಲೆ ನೊರೆಸೂಸುತ್ತ ಚಲಿಸುವ ಕೀಟಗಳು; ರಾತ್ರಿಕಾಲದಲ್ಲಿ ಇವು ನೀರಲ್ಲಿ ತೇಲಿಬಿಟ್ಟ ದೀಪಗಳು. ಒಮ್ಮೆ ಕೊಲಂಬೊಗೆ ಹೋದಾಗ, ಲಂಕೆಯ ದ್ವೀಪವನ್ನು ಒಂದೇ ನೋಟದಲ್ಲಿ ಕಾಣುವ ಅವಕಾಶ ಸಿಕ್ಕಿತು. ತೇಲುವ ಎಲೆಯಂತಹ ನಡುಗಡ್ಡೆಯ ಚೆಲುವನ್ನು, ಸುತ್ತುಗಟ್ಟಿ ಮೊರೆವ ಕಡಲ ಬೆಳ್ನೊರೆ ಹೆಚ್ಚಿಸಿತ್ತು. ಅದೊಂದು ಉಸಿರುಗಟ್ಟಿಸುವ ಭವ್ಯದೃಶ್ಯ.

ತಂತ್ರಜ್ಞಾನವು ಎಷ್ಟೇ ವಿವರಿಸಲಿ, ವಿಮಾನವು ನನ್ನ ಪಾಲಿಗೆ ನಂಬಲಾಗದ ವಿಸ್ಮಯವೇ. ಅದರ ಶೋಧವು ಹಕ್ಕಿಗಳು ಹುಟ್ಟಿಸಿದ ಅಸೂಯೆಯ ಫಲವಿರಬೇಕು. ರೆಕ್ಕೆಗಟ್ಟಿದ ಐರಾವತ-ಕುದುರೆ-ಹಸುಗಳ ಕಲ್ಪನೆಗಳೆಲ್ಲವೂ ಹಾರಾಡುವ ಸುಪ್ತ ಬಯಕೆಯ ನಿಗೂಢಸೃಷ್ಟಿಗಳೇ. ಹಾಗಲ್ಲದಿದ್ದರೆ, ಕೀಲುಕುದುರೆಯನ್ನೋ ಕಸಬರಿಗೆಯನ್ನೋ ಏರಿಕೊಂಡು ಜನ ಹಾರಾಡುವ ಕಥೆಗಳು ಜಗತ್ತಿನಾದ್ಯಂತ ಯಾಕೆ ಸೃಷ್ಟಿಯಾಗುತ್ತಿದ್ದವು? ಮೇಯಲೆಂದು ಭೂಮಿಗೆ ಬರುತ್ತಿದ್ದ ಆನೆಯ ಬಾಲ ಹಿಡಿದು ದೇವಲೋಕಕ್ಕೆ ಹೋದ ರೈತನ; ಹಕ್ಕಿಗಳ ನೆರವಿನಿಂದ ದೇವಲೋಕದ ಔತಣಕೂಟಕ್ಕೆಂದು ಹೋಗುವ ಆಮೆಯ ಕಥೆಗಳನ್ನು ನಾವು ಪೆಪ್ಪರಮೆಂಟಿನಂತೆ ಎಷ್ಟು ಸವಿದಿಲ್ಲ? ವಾಸ್ತವದಲ್ಲಿ ಅಸಾಧ್ಯವಾದುದು ಕಲ್ಪನೆಯೊಳಗೆ ಸಾಕಾರಗೊಳ್ಳುತ್ತದೆ; ಕಲ್ಪನೆ ಹುಟ್ಟಿಸಿದ ಕನಸನ್ನು ಆಧುನಿಕ ವಿಜ್ಞಾನ-ತಂತ್ರಜ್ಞಾನ ನನಸಾಗಿಸುತ್ತದೆ. ಇದರಿಂದ ಪುರಾಣದಲ್ಲಿ ಗಂಧರ್ವರು, ಅಪ್ಸರೆಯರು, ದೇವತೆಗಳಷ್ಟೇ ಅನುಭವಿಸುತ್ತಿದ್ದ ಮೇಘವಿಹಾರದ ಭಾಗ್ಯವನ್ನು ನರಮನುಷ್ಯರೂ ವಾಸ್ತವದಲ್ಲಿ ಪಡೆದುಕೊಂಡರು.

ಬಾಲ್ಯದಲ್ಲಿ ಕಲ್ಪನೆ ಕೆರಳಿಸಿ ಬೆರಗು ಹುಟ್ಟಿಸಿದ ಹಾರುಗುದುರೆಯ ಕಥೆ, ನಾವು ದೊಡ್ಡವರಾಗಿ ಮುಗ್ಧತೆ ಕಳೆದುಕೊಂಡ ಬಳಿಕ ಬುರುಡೆ ಅನಿಸಬಹುದು. ಆದರೆ, ಕಲ್ಪಕತೆಯಿಲ್ಲದೆ ಕಾವ್ಯ ಪುರಾಣಗಳಿರಲಿ,